MAY 2022 **U/ID 30703/ULC1A**

Time : Three hours Maximum : 75 marks

SECTION A — (10 × 2 = 20 marks)

I. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. ಉತ್ತರದ ಮಿತಿ 50 ಪದಗಳು.

1. ಆದಿಕವಿ

2. ಅರ್ಜುನನು ಏಕೆ ತಪಸ್ಸು ಮಾಡುತ್ತಿದ್ದ?

3. ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿಕೊಳ್ಳಲು ಕಾರಣವೇನು?

4. ಅಕ್ಕಮಹಾದೇವಿಯು ಕಂಡ ಕನಸಿನ ವರ್ಣನೆ.

5. ಯಾವುದನ್ನು 'ಅಂತರಂಗ ಶುದ್ಧಿ–ಬಹಿರಂಗ ಶುದ್ಧಿ' ಎಂದು ಬಸವಣ್ಣ ಹೇಳುತ್ತಾನೆ?

6. ಲೋಹಿತಾಶ್ವನು ಹಾವು ಕಚ್ಚಿ ಮರಣ ಹೊಂದಿದ ಸನ್ನಿವೇಶ.

7. ಶಾಪ ನೀಡಲು ಕೈಯೆತ್ತಿದ ಊರ್ವಶಿಯ ಭಯಂಕರ ರೂಪದ ವರ್ಣನೆ.

8. ಮಾಯೆ ಹೇಗೆ ಬೆಳೆದಳು?

9. ರಾಮನು ರಾಗಿ–ವ್ರೀಹಿಯನ್ನು ಸೆರೆಯಲ್ಲಿ ಹಾಕಲು ಹೇಳಿದ ಕಾರಣವೇನು?

10. ಕೇರಳ ರಾಜನು ಹೇಗೆ ಮರಣ ಹೊಂದಿದನು?

11. ಜನಪದ ಗೀತೆಯಲ್ಲಿ ಕಂಡುಬರುವ ತವರುಮನೆಯ ಪ್ರೀತಿ.

12. ಷಟ್ಪದಿ.

SECTION B — (5 × 5 = 25 marks)

II. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ. ಉತ್ತರದ ಮಿತಿ 200 ಪದಗಳು.

13. 'ಆವನೆಂದರಿಯಲ್ಕೆ ಬಾರದು ಅಪೂರ್ವನ್ ಒರ್ವನ್ ಆರಾತಿ ವಿದ್ರಾವಣಂ'.

14. 'ಗಗನಂ ಬಿಳ್ದುದೋ ಮೇಣ್ ನೆಲಕ್ಕೆ ನೆಲನೇಂ ಪುಟ್ಟಿತ್ತೋ'.

15. 'ಒಕ್ಕುದ ಕೊಂಡು ಓಲಾಡುತಿಪ್ಪುದೇ ಭಕ್ತಿ'.

16. 'ಕುಡುಗೋಲ್ವಿಡಿದು ಸಾರ್ದನಸ್ತಾದ್ರಿಯಂ ಸಾರುತಿಹ ಸೂರ್ಯನಂತೆ'.

17. 'ಇನಿಬರಿರೆ ರಂಭಾದಿ ಸೀಮಂತಿನಿಯರೊಳು ಊರ್ವಶಿಯೊಳಾದುದು ಮನ'

18. 'ಬನವಸೆಗೊಡೆಯನಾಗಿರುತಿರ್ಪನಾ ಮಮಕಾರ ಭೂಪಾಲ'.

19. 'ಸುರನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು'.

SECTION C — (3 × 10 = 30 marks)

III. ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. ಉತ್ತರದ ಮಿತಿ 500 ಪದಗಳು.

20. ಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕರುಣಿಸಿದ ಸನ್ನಿವೇಶವನ್ನು ಪಂಪನು ಹೇಗೆ ಚಿತ್ರಿಸಿದ್ದಾನೆ?

21. ಭೀಮ–ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ಕವಿ ರನ್ನನು ಹೇಗೆ ವಿವರಿಸಿದ್ದಾನೆ?

22. ಚಂದ್ರಹಾಸನ ಕಥೆಯನ್ನು ನಿರೂಪಿಸಿ.

23. ಗರತಿಯ ಹಾಡಿನಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಭಾವಗಳನ್ನು ವಿವರಿಸಿ.

24. ಊರ್ವಶಿಯು ಅರ್ಜುನನಿಗೆ ಶಾಪ ನೀಡಿದ ಪ್ರಸಂಗವನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ?
